**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.114/2024

ಸಾಕ್ಷಿಯನ್ನು ದಿಃ **11.12.2025** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ಎಸ್ ವಕೀಲರಿಂದಃ-**

ಇಲ್ಲ ಎನ್ನುತ್ತಾರೆ.

ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ ಬಿ.ಎಸ್ ವಕೀಲರಿಂದಃ-

ನನಗೆ 32 ವರ್ಷ ವಯಸ್ಸು. 1ನೇ ವಾದಿ ನನ್ನ ತಂದೆ. 2ನೇ ವಾದಿ ನನ್ನ ಚಿಕ್ಕಪ್ಪ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ಈಗ ಆರೋಗ್ಯ ಸರಿ ಇಲ್ಲದೇ ಇರುವ ಕಾರಣ ವಿಶ್ರಾಂತಿ ಪಡೆಯುತ್ತಿದ್ದಾರೆ. ಕಳೆದ 2 ವರ್ಷಗಳಿಂದ ನನ್ನ ತಂದೆಗೆ ಆರೋಗ್ಯ ಸರಿ ಇಲ್ಲ. ನನ್ನ ತಂದೆಗೆ ಪೈಲ್ಸ್ ಆಪರೇಷನ್ ಆಗಿದ್ದು, ಕಣ್ಣು ಕಾಣುವುದಿಲ್ಲ ಮತ್ತು ಕಿವಿ ಕೇಳುವುದಿಲ್ಲ. ಈ ಬಗ್ಗೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಯಾವ ಆಧಾರದ ಮೇಲೆ ಅವರಿಗೆ ಮೇಲೆ ಹೇಳಿದ ಖಾಯಿಲೆ ಇದೆ ಎಂದು ಹೇಳುತ್ತಿದ್ದಿರಿ ಎಂದರೆ ಅವರು ಔಷಧಿ ಮತ್ತು ಚಿಕಿತ್ಸೆ ಪಡೆಯುತ್ತಿದ್ದಾರೆ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಗೆ ಔಷಧಿ ಮತ್ತು ಚಿಕಿತ್ಸೆ ನೀಡುವಾಗ ಆತನಿಗೆ ಇಂತಹ ಖಾಯಿಲೆ ಇದೆ, ಇಂತಹ ಔಷಧಿ ಪಡೆಯಬೇಕು ಎಂದುಔಷಧಿ ಚೀಟಿ ನೀಡುತ್ತಾರೆ ಎಂದರೆ ಸರಿ. ಯಾವ ವೈದ್ಯರ ಬಳಿ ನಿಮ್ಮ ತಂದೆಯನ್ನು ತೋರಿಸುತ್ತಿದ್ದಿರಿ ಎಂದರೆ ವೈದ್ಯರ ಹೆಸರು ಗೊತ್ತಿಲ್ಲ. ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ದಾಖಲೆ ಇದೆಯೇ ಎಂದರೆ ಇದೆ. ಆ ದಾಖಲೆಗಳನ್ನು ಯಾವಾಗ ಹಾಜರುಪಡಿಸುತ್ತೀರಿ ಎಂದರೆ ಮುಂದಕ್ಕೆ ಹಾಜರುಪಡಿಸುತ್ತೇನೆ.

ವಾದಪತ್ರವನ್ನು ತಯಾರಿಸಲು ನಾನು ಮತ್ತು ನನ್ನ ತಂದೆ ಮಾಹಿತಿ ಕೊಟ್ಟಿದ್ದೇವೆ. 2024ರಲ್ಲಿ ದಾವೆ ಹಾಕಲು ಮಾಹಿತಿ ಕೊಡುವಾಗ ನನ್ನ ತಂದೆ ಆರೋಗ್ಯವಾಗಿದ್ದರು ಎಂದರೆ ಆರೋಗ್ಯದ ಸಮಸ್ಯೆ ಇತ್ತು. ದಾವೆ ಸಲ್ಲಿಸಲು ನಾನು ಮತ್ತು ನನ್ನ ತಂದೆ ಮಾಹಿತಿ ನೀಡಿದ್ದು, ಆಗ ನನ್ನ ತಂದೆಗೆ ಆರೋಗ್ಯದ ಸಮಸ್ಯೆ ಇತ್ತು ಎಂದು ವಾದ ಪತ್ರದಲ್ಲಿ ಬರೆಸಿಲ್ಲ. ನೀವು ದಾವೆಗೆ ಮಾಹಿತಿ ನೀಡಿದ್ದರಿಂದಾಗಿ ದಾವೆಯಲ್ಲಿ ನಿಮ್ಮನ್ನು ಕೂಡ ಪಕ್ಷಗಾರರನ್ನಾಗಿ ಸೇರಿಸಿಕೊಳ್ಳಲು ಏನಾದರೂ ತೊಂದರೆ ಇತ್ತೇ ಎಂದರೆ ಇಲ್ಲ. ದಾವೆಯಲ್ಲಿ ನೀವು ಯಾಕೆ ಪಕ್ಷಗಾರರಾಗಿ ಸೇರ್ಪಡೆಗೊಂಡಿಲ್ಲ ಎಂದರೆ ನನ್ನ ತಂದೆಗೆ ಆರೋಗ್ಯ ಸಮಸ್ಯೆಯಿಂದಾಗಿ ಈಗ ನಾನು ಸೇರಿಕೊಂಡಿದ್ದೇನೆ. ಈ ದಾವೆ ಹಾಕಿ ಸುಮಾರು 2 ವರ್ಷಗಳಾಯಿತು. ನಾನು ಜನಿಸುವ ಪೂರ್ವದಲ್ಲಿ ನಮ್ಮ ಕುಟುಂಬದಲ್ಲಿ ಆದ ವ್ಯವಹಾರಗಳ ಬಗ್ಗೆ ನನಗಿಂತ ಚೆನ್ನಾಗಿ ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ ಗೊತ್ತಿದೆ. ಚಿಕ್ಕವಯಸ್ಸಿನಲ್ಲಿಯೇ ಆಸ್ತಿಯ ವಿಚಾರ ಒಬ್ಬ ವ್ಯಕ್ತಿಗೆ ಗೊತ್ತಾಗುವುದಿಲ್ಲ ಎಂದರೆ 10 ವರ್ಷದ ನಂತರ ಗೊತ್ತಾಗುತ್ತದೆ. 2ನೇ ವಾದಿ ಈ ದಾವೆಯಲ್ಲಿ ಸಾಕ್ಷಿ ನುಡಿಯುವಾಗ ದಿಃ 25.03.1996ರಲ್ಲಿ ನಾವು ದಾವಾ-2 ಐಟಂ ಸ್ವತ್ತುಗಳನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಿಪಿ-19ರ ಮೇರೆಗೆ ಆದ ಖಾತೆ ಆದೇಶದಂತೆ ಆ ಸಮಯದಿಂದಲೂ ನಾವು ಪ್ರತ್ಯೇಕವಾಗಿ ಸ್ವತ್ತನ್ನು

ಅನುಭವಿಸುತ್ತಾ ಬಂದಿದ್ದೇವೆ ಎಂದರೆ ಸರಿ. ಈಗೆ 1996ರಲ್ಲಿ ನಮ್ಮ ಕುಟುಂಬದಲ್ಲಿ ವಿಭಾಗ ಆಗಿರುವ ಕಾರಣ ಈಗ ಪುನಃ ವಿಭಾಗ ಆಗುವ ಅವಶ್ಯಕತೆ ಇಲ್ಲ ಎಂದರೆ ಸರಿ ಎಂದು ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿಯಲ್ಲ. ಯಾವ ಕಾರಣದಿಂದ ಮೇಲೆ ಹೇಳಿದ ವಿಷಯ ಸರಿ ಇಲ್ಲ ಎಂದು ಹೇಳುತ್ತಿದಿರಿ ಎಂದರೆ ಸಮವಾಗಿ ಭಾಗ ಆಗಿಲ್ಲ. ಆ ಕಾರಣದಿಂದ ಆ ರೀತಿ ಹೇಳುತ್ತಿದ್ದೇನೆ. ಸಮವಾಗಿ ಭಾಗ ಆಗಿಲ್ಲ ಎಂದು ತೋರಿಸಲು ಏನು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಎಂ.ಆರ್ ಮತ್ತು ಆರ್.ಟಿ.ಸಿ ಕೊಟ್ಟಿದ್ದೇನೆ. ನಿಪಿ-1 ರಿಂದ 19ರ ದಾಖಲೆಗಳು 2ನೇ ವಾದಿ ಸಾಕ್ಷಿ ನುಡಿಯುವಾಗ ಹಾಜರುಪಡಿಸಿದ ದಾಖಲೆಗಳು ಎಂದರೆ ಸರಿ. ನನ್ನ ತಂದೆ ಮತ್ತು ಪ್ರಾಸಾ-1 ಸಣ್ಣನಾಯಕ ಅಂದರೆ ನನ್ನ ಚಿಕ್ಕಪ್ಪ ಈ ದಾವೆಯನ್ನು ಜಂಟಿಯಾಗಿ ಸಲ್ಲಿಸಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ ಮಾಡಿದ ಒಕ್ಕಣೆಗಳನ್ನು ಮತ್ತು ಪರಿಹಾರವನ್ನು ಇಬ್ಬರು ಜಂಟಿಯಾಗಿ ಸಲ್ಲಿಸಿದ್ದಾರೆ ಎಂದರೆ ಸರಿ. ಆ ಕಾರಣದಿಂದ ಈ ದಾವೆಯಲ್ಲಿ ಒಬ್ಬರು ನೀಡಿದ ಹೇಳಿಕೆ ಮತ್ತು ಸಾಕ್ಷಿ ಇನ್ನೊಬ್ಬರಿಗೆ ಅನ್ವಯ ಆಗುತ್ತದೆ ಎಂದರೆ ಇಲ್ಲ. 2ನೇ ವಾದಿ ನೀಡಿದ ಹೇಳಿಕೆ ಮತ್ತು ಸಾಕ್ಷಿ ಹೇಗೆ ಅನ್ವಯ ಆಗುವುದಿಲ್ಲ ಎಂದು ನೀವು ಹೇಳುತ್ತಿದ್ದಿರಿ ಎಂದರೆ ಅವರಿಗೆ ಓದು, ಬರಹ ಇಲ್ಲ, ಅವರು ತಪ್ಪಾಗಿ ಹೇಳಿದ್ದರಿಂದ ನಾನು ಬಂದು ಸಾಕ್ಷಿ ನುಡಿಯುತ್ತಿದ್ದೇನೆ. ಯಾವ ಆಧಾರದ ಮೇಲೆ ಪ್ರಾಸಾ-1 ರವರು ನೀಡಿದ ಸಾಕ್ಷಿ ವಿಚಾರಣೆ ಸರಿ ಇಲ್ಲ ಎಂದು ಹೇಳುತ್ತಿದಿರಿ ಎಂದರೆ ಅವರು ಏನು ಸಾಕ್ಷಿ ನುಡಿದಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಪ್ರಾಸಾ-1 ರವರು ಹಾಜರುಪಡಿಸಿದ ಎಂ.ಆರ್ 45/96-97 ನಿಪಿ-19 ಆಗಿದೆ. ಸದರಿ ದಾಖಲೆಯನ್ನು ನಮ್ಮ ಕಡೆಯಿಂದಲೇ ಹಾಜರುಪಡಿಸಿದೆ ಎಂದರೆ ಸರಿ. ನಾನು ಎಂ.ಎ ಓದಿದ್ದೇನೆ. ನಿಪಿ-19 ರಲ್ಲಿ ಕಾಣಿಸಿದ ಕಾಳನಾಯಕ ನನ್ನ ದೊಡ್ಡಪ್ಪ ಅಂದರೆ 1ನೇ ಪ್ರತಿವಾದಿಯ ತಂದೆ. ನಿಪಿ-19 ರಲ್ಲಿ ಕಾಣಿಸಿದ ಸಣ್ಣಕಾಳನಾಯಕ ಎಂದರೆ ನನ್ನ ತಂದೆಯಾದ 1ನೇ ವಾದಿ. ಅದರಲ್ಲಿ ಕಾಣಿಸಿದ ಸಣ್ಣನಾಯಕ ಎಂದರೆ ನನ್ನ ಚಿಕ್ಕಪ್ಪನಾದ 2ನೇ ವಾದಿ. ನಿಪಿ-19 ರಲ್ಲಿ ಹಿಸ್ಸೆಯ ಮೂಲಕ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-19ರಲ್ಲಿ ಹಿಸ್ಸೆಯ ಮೂಲಕ ನನ್ನ ದೊಡ್ಡಪ್ಪನಾದ ಕಾಳನಾಯಕರವರ ಹಿಸ್ಸೆಗೆ ದಾವಾ ಐಟಂ ನಂ.1ರ ಪೈಕಿ 30 ಗುಂಟೆ ಮತ್ತು ದಾವಾ ಐಟಂ ನಂ.2 ಪೈಕಿ 20 ಗುಂಟೆ ಅಂದರೆ ಒಟ್ಟು 1 ಎಕರೆ 10 ಗುಂಟೆ ನೀಡಲಾಗಿದೆ ಎಂದು ಬರೆದಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ತಪ್ಪಾಗಿ ಬರೆದಿದೆ ಎಂದು ನುಡಿಯುತ್ತಾರೆ.

ನಿಪಿ–19ರ ಪ್ರಕಾರ ನನ್ನ ತಂದೆಯಾದ 1ನೇ ವಾದಿಗೆ ದಾವಾ ಸ್ವತ್ತುಗಳಲ್ಲಿ ಒಟ್ಟು 1 ಎಕರೆ 10 ಗುಂಟೆ ಹಿಸ್ಸೆಯಂತೆ ಬಂದಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ 2ನೇ ವಾದಿಯ ಹಿಸ್ಸೆಗೆ ದಾವಾ ಸ್ವತ್ತುಗಳಲ್ಲಿ ಒಟ್ಟು 1 ಎಕರೆ 10 ಗುಂಟೆ ಬಂದಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ತಪ್ಪಾಗಿ ಬರೆದಿದೆ. ನಿಪಿ–19 ರಲ್ಲಿ ಮೂಲಕ ಇವರಿಗೆ ಹಿಸ್ಸೆಯಂತೆ ಅನುಭವದಂತೆ ಪೌತಿ ಮೇರೆಗೆ 1/3 ಭಾಗವಾಗಿ ಖಾತೆ ದಾಖಲು ಮಾಡಲು ಮುಂದಿನ ಆದೇಶಕ್ಕೆ ಕೋರಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ತಪ್ಪಾಗಿ ಬರೆಯಲಾಗಿದೆ. ನಿಪಿ–19ನ್ನು ತಹಶೀಲ್ದಾರರ ಕಚೇರಿಯಿಂದ ಪಡೆದುಕೊಳ್ಳಲಾಗಿದೆ ಎಂದರೆ ಸರಿ. ನಿಪಿ–19 ಸೃಷ್ಟಿಕೃತ ದಾಖಲೆ ಅಲ್ಲ ಎಂದರೆ ಸರಿಯಲ್ಲ. 1996–97ರಲ್ಲಿ ನಿಪಿ–19ರ ದಾಖಲೆಯಾಗಿದ್ದು, ಈ ದಾವೆಯನ್ನು 2024ರಲ್ಲಿ ಸಲ್ಲಿಸಿದ್ದೇವೆ ಎಂದರೆ ಸರಿ. 1997 ರಿಂದ 2024ರವರೆಗೆ 27 ವರ್ಷವಾಗಿದೆ. ನಿಪಿ–19ರ ದಾಖಲೆಯನ್ನು ಕಳೆದ 27 ವರ್ಷಗಳಲ್ಲಿ ಪ್ರಶ್ನೆ ಮಾಡಿದ್ದಿರಾ ಎಂದರೆ ಇಲ್ಲ. ಯಾವ ಕಾರಣದಿಂದಾಗಿ ಪ್ರಶ್ನೆ ಮಾಡಿಲ್ಲ ಎಂದರೆ ಆ ಬಗ್ಗೆ ನಮಗೆ ಗೊತ್ತಿಲ್ಲದೇ ಇದ್ದ ಕಾರಣ ಪ್ರಶ್ನೆ ಮಾಡಿಲ್ಲ. 2024ರಲ್ಲಿ ನಮಗೆ ಗೊತ್ತಾಯಿತು. ಗೊತ್ತಾದ ನಂತರ ಯಾಕೆ ಪ್ರಶ್ನೆ ಮಾಡಿಲ್ಲ ಎಂದರೆ ಗೊತ್ತಿಲ್ಲ ಈ ದಾವೆ ಹಾಕಿದ್ದೇವೆ. ಮೇಲೆ ಹೇಳಿದ ನಿಪಿ–19ರ ದಾಖಲೆ ಸರಿ ಇಲ್ಲ ಎಂದು ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು